# APRIL 04, 2026

## AKASHAVANI - DHARWAD

## PRADESH SAMACHARA (KANNADA) 12.00 P.M.

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

**ಭವಿ ್ಯದ ಆರ್ಥಿಕತೆಯಲ್ಲಿ,** ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳು, ಪ್ರಮುಖ ಪಾತ್ರ ವಹಿಸಲಿವೆ ಎಂದು, ಕೇಂದ್ರ ವಿಜ್ಞಾನ, ತಂತ್ರಜ್ಞಾನ ಮತ್ತು ಭೂ ವಿಜ್ಞಾನ ಖಾತೆ ಸಚಿವ, ಜಿತೇಂದ್ರ ಸಿಂಗ್, ತಿಳಿಸಿದ್ದಾರೆ. ಮೈಸೂರಿನ, ಕೇಂದ್ರೀಯ ಆಹಾರ ತಂತ್ರಜ್ಞಾನ ಸಂಶೋಧನಾಲಯ, ಸಿ.ಎಸ್.ಐ.ಆರ್–ಸಿ.ಎಫ್.ಟಿ.ಆರ್.ಐ. ಸಭಾಂಗಣದಲ್ಲಿ, ಸಂಸ್ಥೆಯ ಅಮೃತ ಮಹೋತ್ಸವದ, ಸಮಾರೋಪ ಸಮಾರಂಭದಲ್ಲಿ, ಅವರು, ಮಾತನಾಡಿದರು. ನವೋದ್ಯಮಗಳನ್ನು ಆರಂಭಿಸುವುದು ಈಗ ಸುಲಭವಾದರೂ, ಸ್ಥಿರವಾಗಿ ಮುನ್ನಡೆಸುವುದು ಹೆಚ್ಚು ಸವಾಲಿನದು. ಅದಕ್ಕಾಗಿ ಉತ್ತಮ ಮೌಲ್ಯಮಾಪನ, ಮಾರುಕಟ್ಟೆ ಕೌಶಲಗಳು ಮತ್ತು ನಿರಂತರ ಬೆಂಬಲದ ಅಗತ್ಯವಿದೆ, ಎಂದರು.

<><><>

**ಸಿ.ಎಸ್.ಐ.ಆರ್. ಮಹಾ ನಿರ್ದೇಶಕಿ,** ಎನ್.ಕಲೈಸೆಲ್ವಿ ಮಾತನಾಡಿ, ಮೈಸೂರಿನ ಸಿ.ಎಫ್.ಟಿ.ಆರ್.ಐ. ಸಂಸ್ಥೆ, ಕ್ರೀಡೆ ಹಾಗೂ ಅಂತರಿಕ್ಷ ಆಹಾರ ಕ್ಷೇತ್ರಗಳಿಗೆ, ಆದ್ಯತೆ ನೀಡಿ, ಸಂಶೋಧನೆ ಕೈಗೊಳ್ಳುತ್ತಿದೆ ಎಂದರು.

<><><>

**ಮೈಸೂರು ಸಿ.ಎಫ್.ಟಿ.ಆರ್.ಐ. ನಿರ್ದೇಶಕ,** ಗಿರಿಧರ ಪಾರ್ವತಮ್ ಅಧ್ಯಕ್ಷತೆಯಲ್ಲಿ, ಜೈವಿಕ ತಂತ್ರಜ್ಞಾನ ಉದ್ಯಮ ಸಂಶೋಧನಾ ಸಲಹಾ ಮಂಡಳಿ ಬಿ.ಐ.ಆರ್.ಸಿ. ‘ಬಯೋನೆಸ್ಟ್’, ಇನ್‌ಕ್ಯೂಬೇ ’ನ್ ಸೆಂಟರ್‌ಅನ್ನು ಸಚಿವ ಜಿತೇಂದ್ರ ಸಿಂಗ್ ಉದ್ಘಾಟಿಸಿದರು.

<><><>

**‘ಫುಡ್ ಬಯೋ ಪ್ರೊಸೆಸಿಂಗ್’** ಕ್ಷೇತ್ರದ, 26 ನವೋದ್ಯಮಗಳು, ಈಗಾಗಲೇ ಇಲ್ಲಿ ಕಾರ್ಯಾರಂಭಿಸಿವೆ.

<><><>

**ಈ ತಿಂಗಳ, 1ನೇ ತಾರೀಖಿನಿಂದ,** 15ರ ವರೆಗೆ, ಸ್ವಯಂ ಜನಗಣತಿ ಆರಂಭವಾಗಿದೆ. ಧಾರವಾಡ ಲೋಕಸಭಾ ಕ್ಷೇತ್ರದ ಜನತೆ, ಹೆಚ್ಚಿನ ಸಂಖ್ಯೆಯಲ್ಲಿ, ಸ್ವಯಂ ಜನಗಣತಿಯಲ್ಲಿ ಭಾಗವಹಿಸುವಂತೆ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಕೋರಿದ್ದಾರೆ. ಧಾರವಾಡ ಜಿಲ್ಲೆ, ಹುಬ್ಬಳ್ಳಿಯ, ತಮ್ಮ ಗೃಹ ಕಚೇರಿಯಲ್ಲಿ, ತಮ್ಮ ಕುಟುಂಬದ ಸ್ವಯಂ ಗಣತಿಯನ್ನು, ಟ್ಯಾಬ್‌ನಲ್ಲಿ ದಾಖಲಿಸಿದ ಅವರು, ದೇಶದ ಭವಿಷ್ಯದ ಯೋಜನೆಗಳು ಹಾಗೂ ಅಭಿವೃದ್ಧಿಗೆ, ಜನಸಂಖ್ಯೆ ಅಂಕಿಅಂಶಗಳು, ದಿಕ್ಸೂಚಿ ಎಂದರು.

<><><>

**ಹಿಂದು ಧರ್ಮಾಚಾರ್ಯರ ಸಭೆ,** ಇಂದು ಬೆಂಗಳೂರಿನಲ್ಲಿ ಆಯೋಜಿತವಾಗಿದೆ. ಕೇಂದ್ರ ಗೃಹ ಖಾತೆ ಸಚಿವ, ಅಮಿತ ಶಾ ಪಾಲ್ಗೊಳ್ಳಲಿದ್ದಾರೆ. ತನ್ನಿಮಿತ್ತ ನಿನ್ನೆ ರಾತ್ರಿ ಬೆಂಗಳೂರಿಗೆ ಆಗಮಿಸಿದ, ಅವರನ್ನು, ಬಿಜೆಪಿ ರಾಜ್ಯಾಧ್ಯಕ್ಷ, ಬಿ.ವೈ. ವಿಜಯೇಂದ್ರ, ವಿಧಾನ ಪರಿಷತ್ ವಿಪಕ್ಷ ನಾಯಕ, ಛಲವಾದಿ ನಾರಾಯಣಸ್ವಾಮಿ ಹಾಗೂ ಸಂಸದ ಪಿ.ಸಿ. ಮೋಹನ, ಎಚ್.ಎ.ಎಲ್. ವಿಮಾನ ನಿಲ್ದಾಣದಲ್ಲಿ, ಬರ ಮಾಡಿಕೊಂಡರು.

<><><>

**ಇಂದು ಪವಿತ್ರ ಶನಿವಾರ.** ಯೇಸು ಕ್ರಿಸ್ತನ ಪುನರುತ್ಥಾನದ ನಿರೀಕ್ಷೆಯಲ್ಲಿ, ನಾಡಿನಾದ್ಯಂತ ಕ್ರೈಸ್ತ ಬಾಂಧವರು, ಮೌನ ಮತ್ತು ನಿರೀಕ್ಷೆಯಲ್ಲಿ ಕಳೆಯುವ ದಿನ. ನಾಳೆ, ಈಸ್ಟರ್ ಭಾನುವಾರ. ಯೇಸು ಮರಣವನ್ನು ಜಯಿಸಿ, ಪುನರುತ್ಥಾನಗೊಂಡ, ಸಂತೋ ದ ದಿನ. ಧಾರವಾಡದ ಹೆಬಿಕ್ ಸ್ಮಾರಕ ದೇವಾಲಯ ಸೇರಿದಂತೆ, ಎಲ್ಲ ಚರ್ಚ್‌ಗಳಲ್ಲಿ, ಗೋದಲಿಯ ಪೂರ್ವ ಸಿದ್ಧತೆ ಮತ್ತು ಸುಂದರ ವಿದ್ಯುದ್ದೀಪಗಳ ಅಲಂಕಾರ ಕೈಗೊಳ್ಳಲಾಗಿದೆ.

<><><>

**ಅಪ್ರಾಪ್ತ ವಯಸ್ಸಿನ ಗರ್ಭಿಣಿ,** ಖಾಸಗಿ ಆಸ್ಪತ್ರೆಗೆ ದಾಖಲಾದರೆ, ಸಂಬಂಧಿಸಿದ ವೈದ್ಯರು, ಪೋಸ್ಕೋ ಕಾಯ್ದೆ ಅಡಿ, ಕೂಡಲೇ ವಿಶೇಷ ಬಾಲನ್ಯಾಯ ಪೊಲೀಸ್ ಘಟಕ ಅಥವಾ ಸಮೀಪದ ಪೊಲೀಸ್ ಠಾಣೆಗೆ ವರದಿ ಮಾಡುವುದು ಕಡ್ಡಾಯ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಸುತ್ತೋಲೆ ಹೊರಡಿಸಿದ್ದು, 18 ವರ್ಷಕ್ಕಿಂತ ಕಡಿಮೆ ವಯಸ್ಸಿನ, ಬಾಲ ಗರ್ಭಿಣಿ ಪ್ರಕರಣಗಳನ್ನು, ಕಾನೂನುಬದ್ಧವಾಗಿ ವರದಿ ಮಾಡಬೇಕು. ಸಹಾಯವಾಣಿ 1–0–9–8ಕ್ಕೆ ಕರೆ ಮಾಡಿ ಮಾಹಿತಿ ನೀಡಬೇಕು. ಇದರಿಂದ, ಬಾಲ ಗರ್ಭಿಣಿಯ, ರಕ್ಷಣೆ ಮತ್ತು ಪುನರ್ವಸತಿಗೆ, ಅನುವಾಗಲಿದೆ ಎಂದು, ಸುತ್ತೋಲೆ ಹೇಳಿದೆ.

<><><>

**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,** ರಾಜ್ಯದಲ್ಲಿ 40 ವರ್ಷ ವಯಸ್ಸು ಮೀರಿದವರಿಗೆ, ಕಣ್ಣಿನ ಉಚಿತ ತಪಾಸಣೆ ಮತ್ತು ಓದುವ ಕನ್ನಡಕ ಒದಗಿಸುವ ಯೋಜನೆ ರೂಪಿಸಿದೆ. ಆಯುಷ್ಮಾನ್ ಆರೋಗ್ಯ ಮಂದಿರ, ಉಪ ಕೇಂದ್ರಗಳ ಮೂಲಕ, ಆಶಾ ಕಿರಣ ಯೋಜನೆ ಜಾರಿಗೊಳಿಸಲು ಉದ್ದೇಶಿಸಿದ್ದು, ಮೊದಲ ಹಂತದಲ್ಲಿ, ಯಾದಗಿರಿ ಜಿಲ್ಲೆಯಲ್ಲಿ, ಪ್ರಾಯೋಗಿಕವಾಗಿ ಅನುಷ್ಠಾನಗೊಳ್ಳಲಿದೆ.

<><><>

**ಕೊಡಗು ಜಿಲ್ಲೆ, ಮಡಿಕೇರಿ ತಾಲೂಕು, ನಾಪೋಕ್ಲು ಬಳಿ,** ತಡಿಯಾಂಡಮೋಳ್ ಬೆಟ್ಟಕ್ಕೆ, ಚಾರಣಕ್ಕೆಂದು ಬಂದಿದ್ದ, ಕೇರಳದ, 36 ವರ್ಷದ ಶರಣ್ಯಾ, ಗುರುವಾರ ಸಂಜೆ, ನಾಪತ್ತೆಯಾಗಿದ್ದಾರೆ. ಕಾಡಾನೆಗಳು ಹೆಚ್ಚಿರುವ ಈ ಪ್ರದೇಶದಲ್ಲಿ, ಕಳೆದ ಎರಡು ದಿನಗಳಿಂದ, ಅರಣ್ಯ ಇಲಾಖೆ, ಪೊಲೀಸ್ ಸಿಬ್ಬಂದಿ ಹಾಗೂ ಸ್ಥಳೀಯರು ಕಾಡಿನಲ್ಲಿ ಹುಡುಕಾಟ ಮುಂದುವರೆಸಿದ್ದಾರೆ.

<><><>

**ತುಮಕೂರು ಜಿಲ್ಲೆ, ಮಧುಗಿರಿಯ,** ಇಳಿಜಾರು ಕಲ್ಲುಬಂಡೆಗಳ ಮಧ್ಯೆ, ಅಪರೂಪದ ನಾಗಾರ್ಜುನ ರೇಸರ್ ಹಾವು, ಪ್ರಥಮ ಬಾರಿಗೆ ಗೋಚರಿಸಿದ್ದು, ಉರಗ ಪ್ರೇಮಿಗಳು ದಾಖಲಿಸಿದ್ದಾರೆ. ಇದು ವಿಷಕಾರಿಯಲ್ಲ. ರಸ್ಸೆಲ್ಸ್ ಕುಕ್ರಿ ಹಾವನ್ನು ಹೋಲುತ್ತದೆ. ದಕ್ಷಿಣ ಭಾರತದ, ದಖನ್ ಪ್ರಸ್ಥಭೂಮಿಯಲ್ಲಿ ಮಾತ್ರ ಕಾಣಸಿಗುವ, ಅಪರೂಪದ ನಾಗಾರ್ಜುನ ಸಾಗರ ರೇಸರ್ ಸ್ನೇಕ್, 1976 ರಲ್ಲಿ, ಆಂಧ್ರಪ್ರದೇಶದ, ಗುಂಟೂರು ಜಿಲ್ಲೆಯ, ನಾಗಾರ್ಜುನ ಬೆಟ್ಟದಲ್ಲಿ ಮಾತ್ರ ಕಂಡು ಬಂದಿತ್ತು.

<><><>

**ವಿಜಯನಗರ ಜಿಲ್ಲೆ, ಹೊಸಪೇಟೆ ತಾಲೂಕು,** ತಿಮ್ಮಲಾಪುರದ ಬಳಿ, ರಾಷ್ಟ್ರೀಯ ಹೆದ್ದಾರಿ 50ರಲ್ಲಿ, 3 ವರ್ಷದ ಗಂಡು ಚಿರತೆ, ವಾಹನ ಗುದ್ದೋಡಿದ ಪರಿಣಾಮ, ಸ್ಥಳದಲ್ಲೇ ಮೃತಪಟ್ಟಿದೆ. ಹೊಸಪೇಟೆ ಪ್ರಾದೇಶಿಕ ಅರಣ್ಯ ವಲಯದ, ಚಿಲುಕನಕಟ್ಟಿ ಶಾಖೆ ಅರಣ್ಯ ಇಲಾಖೆ ಸಿಬ್ಬಂದಿ, ಭೇಟಿ ನೀಡಿ, ಪರಿಶೀಲಿಸಿದರು. 3 ತಿಂಗಳ ಹಿಂದೆ, ವಾಹನ ಡಿಕ್ಕಿಯಾಗಿ, ಇದೇ ಸ್ಥಳದಲ್ಲಿ ಚಿರತೆಯೊಂದು ಮೃತಪಟ್ಟಿತ್ತು.

<><><>

**ಬಿಸಲಿನ ತಾಪ ಹೆಚ್ಚುತ್ತಿರುವ ಹಿನ್ನೆಲೆ,** ನಾಡಿದ್ದು 6ನೇ ತಾರೀಖಿನಿಂದ, ಮೇ ಅಂತ್ಯದ ವರೆಗೆ, ಕಲಬುರಗಿ ಉಚ್ಚ ನ್ಯಾಯಾಲಯದ, ನ್ಯಾಯಪೀಠಗಳ ಕಾರ್ಯಕಲಾಪದ ಸಮಯ ಬದಲಿಸಲಾಗಿದೆ. ಕಲಬುರಗಿ ವಿಭಾಗದ, ಬಳ್ಳಾರಿ, ಬೀದರ, ಕೊಪ್ಪಳ, ರಾಯಚೂರು, ಕಲಬುರಗಿ, ವಿಜಯನಗರ, ಯಾದಗಿರಿ ಹಾಗೂ ಬೆಳಗಾವಿ ವಿಭಾಗ ವ್ಯಾಪ್ತಿಯ, ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲೆಗಳ, ನ್ಯಾಯಾಲಯ ಕಲಾಪ, ಬೆಳಗ್ಗೆ 8 ರಿಂದ 11 ಗಂಟೆ ಹಾಗೂ 11.30 ರಿಂದ 1.30ರ ವರೆಗೆ ಮಾತ್ರ ನಡೆಯಲಿದೆ.

**<><><>**

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.**